“ಅದನ್ನು ಕದ್ದವರು. ಬನ್ನಿ, ನಿಮ್ಮ ವಜ್ರಗಳು ಸುರಕ್ಷಿತವಾಗಿವೆಯೇ ಅಂತ ನೋಡೋಣ.”

ಕರಮಚಂದ ಮೆಲ್ಲಗೆ ಪೆಟ್ಟಿಗೆಯನ್ನು ಸರಿಸಿ, ತಿಜೋರಿಯ ಕೀ ಹೋಲಿಗೆ ಸಿಕ್ಕಿಸಿ ತಿರುಗಿಸಿದ. ನಾವು ಉಸಿರು ಬಿಗಿ ಹಿಡಿದು ನೋಡುತ್ತಿದ್ದೆವು. ಕೀರಲು ದನಿಯೊಂದಿಗೆ ತಿಜೋರಿಯ ಬಾಗಿಲು ತೆಗೆದ ಕರಮಚಂದ... ತಿಜೋರಿ ಖಾಲಿಯಾಗಿತ್ತು!

“ನಾನ್ ತಪ್ ಮಾಡ್ದೆ! ಗೊತ್ತಾಯ್ತು!! ನಿಮ್ಗೆ ಮನೆ ತೋರಿಸಲು ಹೋಗುವಾಗ, ಕೋಣೆಗೆ ಬೀಗ ಹಾಕಬೇಕಿತ್ತು!”

“ಬೀಗ ಹಾಕಿದ್ರೆ, ನಿಮ್ಗೆ ಕಳ್ಳ ಸಿಕ್ತಾನೇ ಇರಲಿಲ್ಲ!!”

“ಅಂದರೆ?”

“ಬಾಗಿಲು ತೆಗೆದಿಟ್ಟಿದ್ದರಿಂದ ಕಳ್ಳ ಒಳಗೆ ಬಂದು ವಜ್ರ ಎಗರಿಸಿದ. ಒಳಗೆ ಬರುವಾಗಲೇ ನಾನು ಬಾಗಿಲಿನ ಬೀಗದಲ್ಲಿದ್ದ ಗೀರುಗಳನ್ನು ಗಮನಿಸಿದೆ. ಯಾರೋ ಬೀಗವನ್ನು ಬಲಾತ್ಕಾರವಾಗಿ ತೆಗೆಯಲು ಯತ್ನಿಸಿದ್ದು ಗೊತ್ತಾಯಿತು. ಹಾಗಿದ್ದರೆ ವಜ್ರಗಳು ಒಳಗೇ ಇರಬೇಕೆಂದು ತರ್ಕಿಸಿದೆ. ಅದಕ್ಕೇ ಇಲ್ಲಿಂದ ಹೊರ ಹೋಗುವಾಗ ಬೀಗ ಹಾಕಲು ನಿಮ್ಗೆ ಹೇಳಲಿಲ್ಲ. ಇಲ್ದೇ ಇದ್ದರೆ, ಆತ ನಿಧಾನವಾಗಿ ಯಾವತ್ತಾದರೂ ವಜ್ರ ಕದಿಯುತ್ತಿದ್ದ!”

“ಕಳ್ಳ ಯಾರೆಂಬುದು ನಿಮ್ಗೆ ಗೊತ್ತಾಯಿತೇ?”

“ಹಾಂ... ಗೊತ್ತಾದ ಹಾಗೆಯೇ! ವಜ್ರವನ್ನು ಹೊಂದಿದ್ದವನು ಕಳ್ಳ ಅಂತ ಸುಲಭವಾಗಿ ಹೇಳಬಹುದಲ್ಲ! ಬನ್ನಿ, ಹಜಾರಕ್ಕೆ ಹೋಗೋಣ.”

ಚಿನ್ನಪ್ಪ ಹಜಾರದಲ್ಲಿ ಕುಳಿತು, ಟೀವಿ ವೀಕ್ಷಣೆಯನ್ನು ಮುಂದುವರೆಸಿದ್ದ. ನಮ್ಮತ್ತ ಒಮ್ಮೆ ನಿರ್ಲಕ್ಷ್ಯದ ನೋಟ ಬೀರಿ, ಮತ್ತೆ ಟೀವಿಯೊಳಗೆ ದೃಷ್ಟಿ ಹುದುಗಿಸಿದ.

“ಚಿನ್ನಪ್ಪ, ಮಹೇಶ ಎಲ್ಲಿಗೆ ಹೋಗಿದ್ದು?” ಬೋಪಯ್ಯ ವಿಚಾರಿಸಿದ.

“ಅವ್ನು ಆವಾಗ್ಲೇ ಬಂದ. ಹೆಂಡ್ತಿ ಜೊತೆ ರೂಮಲ್ಲಿ, ಬಾಗಿಲು ಹಾಕಿ, ಏನೋ ಮಾತುಕತೆ ಮಾಡ್ತಿದ್ದಾನೆ.” ಚಿನ್ನಪ್ಪ ಉತ್ತರಿಸಿದ.

“ಬಿದ್ದಪ್ಪ, ನೀನು ಚಿನ್ನಪ್ಪನ ಹತ್ರ ಮಾತಾಡ್ತಿರು. ನಾನೀಗ ಬರ್ತೀನಿ.” ಅಂತ ಬೆರಳೆತ್ತಿ, ಮೂತ್ರಶಂಕೆಗೆ ಹೋಗುವ ಹಾಗೆ ಸನ್ನೆ ಮಾಡಿದ.

“ಇಲ್ಲೇ ಟಾಯ್ಲೆಟ್ ಇದೆ.” ಬೋಪಯ್ಯ ಹೇಳಿದ.

“ಬೇಡ. ಪ್ರಕೃತಿಯ ಕರೆಗೆ ಪ್ರಕೃತಿಯ ಹತ್ತಿರವೇ ಹೋದರೆ ಚೆನ್ನ.”

ಬೋಪಯ್ಯ ಜೋರಾಗಿ ನಕ್ಕ.

ನಾನು ಚಿನ್ನಪ್ಪನೊಡನೆ ಲೋಕಾಭಿರಾಮಕ್ಕೆ ತೊಡಗಿದೆ. ವಾಸ್ತವವಾಗಿ ಮನೆಯ ಬಗ್ಗೆ ಏನು ಹೇಳುವುದೆಂದೇ ನನಗೆ ತೋಚಲಿಲ್ಲ. ಕರಮಚಂದ ಏನೊಂದೂ ಸೂಚನೆ ನೀಡದೆ ತಟ್ಟನೆ ಹೇಳಿ, ಹೋಗಿದ್ದ.

“ಚಿನ್ನಪ್ಪ, ಮನೆ ಚೆನ್ನಾಗಿದೆ.” ಹಾಗೆಂದು ಚಿನ್ನಪ್ಪನೊಡನೆ ಮನೆಯ ಬಗ್ಗೆ ಮಾತನಾಡತೊಡಗಿದೆ. ಆತ ಅರೆಮನಸ್ಸಿನಿಂದ ನನ್ನ ಮಾತು ಕೇಳುತ್ತಾ, ಟೀವಿಯಲ್ಲಿ ಮಗ್ನನಾಗಿದ್ದ. ನಡು ನಡುವೆ ಬೋಪಯ್ಯ ಮಾತು ಸೇರಿಸುತ್ತಿದ್ದ. ನನ್ನಲ್ಲಿ ಮಾತನಾಡಲು ಹೆಚ್ಚು ವಿಷಯ ಇರಲಿಲ್ಲ. ಕಿರಿಕಿರಿಯೆನಿಸಿತು. ಮೂತ್ರಶಂಕೆಗೆ ಹೋದ ಕರಮಚಂದ ಯಾಕೆ ಅಷ್ಟು ವಿಳಂಬ ಮಾಡ್ತಿದ್ದಾನೆ? ಆತನಿಗೆ ಚಿಟ್ಟೆ ನೋಡುವ ಹುಚ್ಚು ಇದೆಯೆಂಬುದು ನನಗೆ ಗೊತ್ತು. ಪ್ರಾಯಶಃ ಯಾವುದೋ ಹೊಸ ಜಾತಿಯ ಚಿಟ್ಟೆ ಕಂಡು, ಅದರ ಫೋಟೊ ತೆಗೆಯುವುದರಲ್ಲಿ ಮಗ್ನನಾಗಿದ್ದಾನೆಯೇ? ಅಥವಾ ಮೂತ್ರಶಂಕೆಗೆ ‘ಸೂಕ್ತ’ವಾದ ಜಾಗ ಸಿಗಲಿಲ್ಲವೇ! ನಗು ಬಂದಿತು. ಗಡಿಯಾರ ನೋಡಿಕೊಂಡೆ. ಕರಮಚಂದ ಹೋಗಿ